**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ**

**ಸಿ.ಸಿ.ನಂಃ 357/2022**

| | | |
|---|---|---|
| ಫಿರ್ಯಾದುದಾರಃ | 1. | ಕರ್ನಾಟಕ ಸರ್ಕಾರದ ಪರ<br>ಜೇವರ್ಗಿ ಪೋಲಿಸ ಠಾಣೆ |
| | | **ವಿರುದ್ಧ** |
| ಆರೋಪಿತ | 1. | ವಿಶಾಲಕುಮಾರ ತಂದೆ ಬಾಬು ಬಡಿಗೇರ,<br>ವಃ 20 ವರ್ಷ, ಉಃ ಚಾಲಕ<br>ಸಾಃ ವಿದ್ಯಾನಗರ ಜೇವರ್ಗಿ, ತಾಃ ಜೇವರ್ಗಿ,<br>ಜಿಃ ಕಲ್ಬುರ್ಗಿ |

**ಆಪಾದನೆ**

ನಾನು ಸಂದೀಪ್.ಎ.ನಾಯಿಕ್

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಜೇವರ್ಗಿ

| | | |
|---|---|---|
| ಆರೋಪಿಯಾದ ನೀವು, | 1. | ವಿಶಾಲಕುಮಾರ ತಂದೆ ಬಾಬು ಬಡಿಗೇರ,<br>ವಃ 20 ವರ್ಷ, ಉಃ ಚಾಲಕ<br>ಸಾಃ ವಿದ್ಯಾನಗರ ಜೇವರ್ಗಿ, ತಾಃ ಜೇವರ್ಗಿ,<br>ಜಿಃ ಕಲ್ಬುರ್ಗಿ |

ನಿಮ್ಮ ಮೇಲೆ ಮಾಡುವ ಆಪಾದನೆ  ಏನೆಂದರೆ**,**

ದಿನಾಂಕ 21-12-2021 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಶಹಾಪೂರ-ಜೇವರ್ಗಿ ರಾಷ್ಟ್ರೀಯ ಹೆದ್ದಾರಿ ಅವರಾದ ಸೀಮಾಂತರದ ಭೂತಪುರ ಕಲ್ಯಾಣ ಮಂಟಪದ ಹತ್ತಿರದ ರಸ್ತೆಯ ಮೇಲೆ ಆರೋಪಿಯಾದ ನೀವು ನಿಮ್ಮ ರಿಟ್ಜ್ ಕಾರ್ ನಂ.ಕೆಎ-04 ಎಂ.ಕ್ಯೂ-0557ನ್ನು ಶಹಾಪೂರ ರಸ್ತೆಯ ಕಡೆಯಿಂದ ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿ ಸದರಿ ರಸ್ತೆಯ ಮೇಲೆ ಜೇವರ್ಗಿ ಕಡೆಗೆ ನಡೆಸಿಕೊಂಡು ಹೋಗುತ್ತಿದ್ದ ಚಂದ್ರಗೌಡರವರ ಮೋಟಾರ್ ಸೈಕಲ್ ನಂ.ಕೆ.ಎ-32 ಇ.ಆರ್-1603ನೆದ್ದಕ್ಕೆ ಹಿಂದಿನಿಂದ ಡಿಕ್ಕಿಪಡಿಸಿ ಅಪಘಾತಪಡಿಸಿದ ಕಾರಣ ಭಾರತೀಯ ದಂಡ ಸಂಹಿತೆ

ಕಲಂ 279 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಎರಡನೇಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, ಆರೋಪಿಯಾದ ನೀವು ನಿಮ್ಮ ರಿಟ್ಜ್ ಕಾರ್ ನಂ.ಕೆಎ-04 ಎಂ.ಕ್ಯೂ-0557ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡಿ ಮುಂದೆ ಜೇವರ್ಗಿ ಕಡೆಗೆ ಮೋಟಾರ್ ಸೈಕಲ್ ನಂ.ಕೆ.ಎ-32 ಇ.ಆರ್-1603ನ್ನು ನಡೆಸಿಕೊಂಡು ಹೋಗುತ್ತಿದ್ದ ಚಂದ್ರಗೌಡರವರ ವಾಹನಕ್ಕೆ ಹಿಂದಿನಿಂದ ಡಿಕ್ಕಿಪಡಿಸಿ ಅಪಘಾತಪಡಿಸಿದ ಕಾರಣ ಚಂದ್ರಗೌಡರವರು ರಸ್ತೆಯ ಮೇಲೆ ಬಿದ್ದು ಅವರ ತಲೆಗೆ ಹಣೆಗೆ ಮೂಗಿನ ಹತ್ತಿರ ಕುತ್ತಿಗೆ ಹತ್ತಿರ ಭಾರೀ ರಕ್ತಗಾಯ ಮತ್ತು ಗುಪ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಡುವಂತೆ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಮೂರನೇಯದಾಗಿ ಅದೇ ದಿನ, ಸ್ಥಳ ಹಾಗೂ ಸಮಯದಂದು, ಆರೋಪಿಯಾದ ನೀವು ನಿಮ್ಮ ರಿಟ್ಜ್ ಕಾರ್ ನಂ.ಕೆಎ-04 ಎಂ.ಕ್ಯೂ-0557ನ್ನು ಅತಿ ವೇಗ, ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡಿ ಮೋಟಾರ್ ಸೈಕಲ್ ನಂ.ಕೆ.ಎ-32 ಇ.ಆರ್-1603ನ್ನು ನಡೆಸಿಕೊಂಡು ಹೋಗುತ್ತಿದ್ದ ಚಂದ್ರಗೌಡರವರ ವಾಹನಕ್ಕೆ ಹಿಂದಿನಿಂದ ಡಿಕ್ಕಿಪಡಿಸಿ ಸದರಿ ಅಪಘಾತವಾದ ಸಂಗತಿಯನ್ನು ಹತ್ತಿರದ ಠಾಣೆಗೆ ತಿಳಿಸದೆ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸದೇ ನಿಮ್ಮ ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿಹೋದ ಕಾರಣ ಮೋಟಾರ ವಾಹನ ಕಾಯ್ದೆ 187 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಸಂದೀಪ್.ಎ.ನಾಯಿಕ್)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

ದಿನಾಂಕಃ 18-03-2025